ಇಲಾಖೆ / ವಿಷಯ: DEPARTMENT / SUBJECT: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER : ಪ್ರಜಾವಾಣಿ        ದಿನಾಂಕ : DATE : 05/05/2019

# ಸರ್ಕಾರಿ ನೌಕರರ ಪ್ರಭಾರ ಭತ್ಯೆ ಹೆಚ್ಚಳ

ಬೆಂಗಳೂರು: ಸ್ವತಂತ್ರ ಪ್ರಭಾರ ಹಾಗೂ ತಮ್ಮ ಹುದ್ದೆಯ ಜತೆಗೆ ಹೆಚ್ಚುವರಿ ಹುದ್ದೆ ಹೊಂದಿರುವ ಸರ್ಕಾರಿ ನೌಕರರ ಪ್ರಭಾರ ಭತ್ಯೆಯನ್ನು ಹೆಚ್ಚಳ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಮೂರು ತಿಂಗಳಿಗೆ ಶೇ 7.5 ಹಾಗೂ ನಂತರದ ಅವಧಿಗೆ ಶೇ 15 ಹೆಚ್ಚಳ ಮಾಡಲಾಗಿದೆ. 2012ರಲ್ಲಿ ಪ್ರಭಾರ ಭತ್ಯೆ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. 7 ವರ್ಷಗಳ ಬಳಿಕ ಅದನ್ನು ಪರಿಷ್ಕರಣೆ ಮಾಡಲಾಗಿದೆ. ಭತ್ಯೆ ಹೆಚ್ಚಳಕ್ಕೆ ಆರನೇ ವೇತನ ಆಯೋಗ ಶಿಫಾರಸು ಮಾಡಿರಲಿಲ್ಲ. ಸಚಿವಾಲಯ ನೌಕರರ ಸಂಘದ ಒತ್ತಡಕ್ಕೆ ಮಣಿದು ಸರ್ಕಾರ ಈ ಕ್ರಮ ಕೈಗೊಂಡಿದೆ. ಹೆಚ್ಚುವರಿಯಾಗಿರುವ ಒಂದು ಪ್ರಭಾರ ಹುದ್ದೆಗೆ ಮಾತ್ರ ಇದು ಅನ್ವಯವಾಗಲಿದೆ.